# ಹಳೇ ಒಡಂಬಡಿಕೆಯನ್ನು ಕ್ರೈಸ್ತರು ಉಪಯೋಗಿಸುವುದು


## ಹೂಗೋ ಮೆಕ್ಕೊರ್ಡ್


*“ನಾವು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ತರುವಂತೆ ನಮ್ಮ ಉಪಾಧ್ಯಾಯನಂತಿತ್ತು” (ಗಲಾತ್ಯ 3:24).*

ಒಂದು ಮರಕ್ಕೆ ತಾಯಿ ಬೇರು ಮುಖ್ಯವಾದದ್ದಾಗಿರುವುದು ಅದರಂತೆ ಕ್ರೈಸ್ತತ್ವಕ್ಕೆ ಹಳೇ ಒಡಂಬಡಿಕೆಯು ಮಹತ್ವದ್ದಾಗಿರುವುದು. ಯೇಸು ಮತ್ತು ಹೊಸ ಒಡಂಬಡಿಕೆಯ ಪ್ರತಿಯೊಬ್ಬ ಬರಹಗಾರನು ಹಳೇ ಒಡಂಬಡಿಕೆಯ ಉಪಯೋಗ ಮಾಡಿಕೊಂಡನು. ಚೆನ್ನಾಗಿ ಮಾಹಿತಿ ಪಡೆದ ಕ್ರೈಸ್ತನು ಇಂದು ಹಳೇ ಒಡಂಬಡಿಕೆಯನ್ನು ಉಪಯೋಗಿಸತಕ್ಕ ಆರು ಮಾರ್ಗಗಳ ಕಡೆಗೆ ನೋಡೋಣ.

### ಮೂಲಗಳನ್ನು ಶೋಧಿಸುವುದು

“ಸೃಷ್ಟಿಯ ಪ್ರಾರಂಭಕ್ಕಾಗಿ” (ಮಾರ್ಕ 10:6) ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯ ಕಡೆಗೆ ತೋರಿಸುತ್ತದೆ. ಹಾಗೆಯೇ, ಮನುಷ್ಯನ ಮೂಲದ ಬಗೆಗಿನ ಪ್ರಶ್ನೆಗಳು ಹಳೇ ಒಡಂಬಡಿಕೆಯಲ್ಲಿ ಉತ್ತರಿಸಲ್ಪಟ್ಟಿವೆ: “ಮನುಷ್ಯನನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನೆಂಬುದನ್ನು ನೀವು ಓದಿರುವದಿಲ್ಲವೋ!” (ಮತ್ತಾಯ 19:4). “ಪ್ರಥಮ ಮನುಷ್ಯ, ಆದಾಮನ” (1 ಕೊರಿಂಥ 15:45) ಬಗ್ಗೆ ಚರ್ಚಿಸುವಾಗ ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯನ್ನು ಉಲ್ಲೇಖಿಸುತ್ತದೆ. ಮೂಲಗಳ ಬಗ್ಗೆ ಕೇಳಲ್ಪಡುವಾಗ, ಯೇಸು ಮತ್ತು ಪೌಲನು ಮಾಡಿದಂತೆ, ಕೇಳುವವರಿಗೆ ಆದಿಕಾಂಡ ಗ್ರಂಥವನ್ನು ಉಲ್ಲೇಖಿಸಬಹುದು.

### ಯೇಸುವಿನ ದೇವತ್ವವನ್ನು ರುಜುವಾತು ಪಡಿಸುವುದು

ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಅಧ್ಯಯನ ಮಾಡುವದರಿಂದ ಯೇಸುವು ದೇವರ ಕುಮಾರನಾಗಿದ್ದಾನೆಂದು ನಿಶ್ಚಿತತೆಯುಳ್ಳವರಾಗಬಹುದು. ಅನೇಕ ವಿಚಾರ ಸರಣಿಗಳು ನಜರೇತಿನ ಯೇಸುವು ಕ್ರಿಸ್ತನು, ಜೀವಿಸುವ ದೇವರ ಕುಮಾರನು ಎಂಬ ಒಂದು ವಿಚಾರದಲ್ಲಿ ಒಂದುಗೂಡುತ್ತವೆ. ಅವುಗಳಲ್ಲಿ ಆತನ ಗಣನೀಯವಾದ ಬೋಧನೆಗಳು (ಯೋಹಾನ 7:46), ಆತನಲ್ಲಿ ಪಾಪವಿಲ್ಲದಿರುವಿಕೆ (ಯೋಹಾನ 8:46), ಆತನ ಅದ್ಭುತಗಳು (ಯೋಹಾನ 10:25), ಆತನ ಪ್ರಭಾವ (ಅಪೊಸ್ತಲರ ಕೃತ್ಯಗಳು 4:13) ಮತ್ತು ಆತನ ತ್ಯಾಗದ ಪ್ರೀತಿ (ಯೋಹಾನ 10:11) ಒಳಗೊಂಡಿರುತ್ತವೆ. ಹಾಗಿದ್ದರೂ,

ಹೊಸ ಒಡಂಬಡಿಕೆಯ ಕ್ರೈಸ್ತರಿಂದ ಮನವಿಮಾಡಲ್ಪಟ್ಟು ಹೆಚ್ಚಾದ ರುಜುವಾತು ಹಳೇ ಒಡಂಬಡಿಕೆಯಲ್ಲಿ ಕಂಡು ಬರುತ್ತದೆ.

ಪಂಚಾಶತ್ತಮ ದಿನದಂದಿನ ಪೇತ್ರನ ಪ್ರಸಂಗವು ಒಂದು ಸಂಗತಿಯನ್ನು ತೋರಿಸಿತು: ಯೇಸುವು "ಕರ್ತನೂ ಕ್ರಿಸ್ತನೂ" ಆಗಿದ್ದಾನೆ (ಅಪೊಸ್ತಲರ ಕೃತ್ಯಗಳು 2:36ಬಿ). ಆ ಸಂಗತಿಗಾಗಿ ಪೇತ್ರನು ಹೆಚ್ಚಾಗಿ ತನ್ನ ರುಜುವಾತನ್ನು ಯೋವೇಲ ಮತ್ತು ಕೀರ್ತನೆಗಳ ಗ್ರಂಥಗಳಿಂದ ತೆಗೆದು ಕೊಂಡನು. ಸೊಲೊಮೋನನ ಮಂಟಪದಲ್ಲಿಯ ತನ್ನ ಪ್ರಸಂಗದಲ್ಲಿ, "ದೇವರು ತಾನು ನೇಮಿಸಿದ ಕ್ರಿಸ್ತನು ಬಾಧೆಯನ್ನು ಅನುಭವಿಸಿ ಸಾಯಬೇಕೆಂಬುದಾಗಿ ಎಲ್ಲಾ ಪ್ರವಾದಿಗಳ ಬಾಯಿಂದ ಮುಂಚಿತವಾಗಿ ಹೇಳಿಸಿದ ಮಾತನ್ನು ಹೀಗೆ ನೆರವೇರಿಸಿದನು ..." (ಅಪೊಸ್ತಲರ ಕೃತ್ಯಗಳು 3:18-21) ಎಂಬುದನ್ನು ಒಪ್ಪಿಕೊಂಡನು. ಪರಿಶುದ್ಧಾತ್ಮನು ತನಗೆ ನಡಿಯುವ ಶಕ್ತಿಯನ್ನು ಕೊಟ್ಟಂತೆ (ಅಪೊಸ್ತಲರ ಕೃತ್ಯಗಳು 2:4) ಪೇತ್ರನು ಪ್ರಸಂಗಿಸಿದ್ದರಿಂದ, ಹಳೇ ಒಡಂಬಡಿಕೆಯ ಅವನ ಉಪಯೋಗವು ದೇವರು ಬಯಸಿದ ರೀತಿಯಲ್ಲೆ ಇತ್ತು.

ಹಾಗೆಯೇ, ಸ್ತೇಫನನು ಪರಿಶುದ್ಧಾತ್ಮನಿಂತ ಮಾತಾಡುವಾಗ, (ಅಪೊಸ್ತಲರ ಕೃತ್ಯಗಳು 6:10), ಕ್ರಿಸ್ತನ ದೇವತ್ವವನ್ನು ಕುರಿತು ಪ್ರಸಂಗಿಸುವಾಗ, ಆದಿಕಾಂಡ, ವಿಮೋಚನಕಾಂಡ, ಧರ್ಮೋಪದೇಶಕಾಂಡ, ಯೆಹೋಶುವ, ಆಮೋಸ ಮತ್ತು ಯೆಶಾಯ ಗ್ರಂಥಗಳನ್ನು ಉಲ್ಲೇಖಿಸಿದನು. ಐತಿಯೋಪ್ಯದ ಕಂಚುಕಿಯೊಂದಿಗೆ ಯೇಸುವಿನ ಬಗ್ಗೆ ಪ್ರಸಂಗಿಸಿದಾಗ, ಫಿಲಿಪ್ಪನು ಹಳೇ ಒಡಂಬಡಿಕೆಯನ್ನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 8:26-38). ಅನ್ಯ ಕೊರ್ನೆಲ್ಯನಿಗೆ ಪೇತ್ರನು ಯೇಸುವನ್ನು ಕುರಿತು, "ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ" (ಅಪೊಸ್ತಲರ ಕೃತ್ಯಗಳು 10:43) ಎಂದು ದೃಢಪಡಿಸಿದನು.

ಪೌಲನು, ಅಂತಿಯೋಕ್ಯದ ಪ್ರಸಂಗದಲ್ಲಿ, ಪಂಚ ಗ್ರಂಥಕ್ಕೆ, ಯೆಹೋಶುವನಿಗೆ, ಸಮುವೇಲನ ಗ್ರಂಥಕ್ಕೆ, ಕೀರ್ತನೆಗಳ ಗ್ರಂಥಕ್ಕೆ, ಹಬಕ್ಕೂಕನಿಗೆ, ಯೆಶಾಯನಿಗೆ ನೇರ ವಾಗಿ ಉಲ್ಲೇಖಿಸಿದನು. ಅದಲ್ಲದೆ, "ಪ್ರವಾದಿಗಳ ಮಾತುಗಳು" ಯೇಸುವು ಶಿಲುಬೆಗೆ ಹಾಕಲ್ಪಟ್ಟಾಗ ನೇರವೇರಿದವೆಂದು ತೋರಿಸಿದನು (ಅಪೊಸ್ತಲರ ಕೃತ್ಯಗಳು 13:27).

ಸಹಜವಾಗಿ, ಪೌಲನ ಹಾಗೆಯೇ ಇತರ ಎಲ್ಲಾ ಹೊಸ ಒಡಂಬಡಿಕೆಯ ಪ್ರಸಂಗಿಗಳ ಕ್ರಮ ಪ್ರಕಾರವಾದ ರೂಢಿಯು ಹಳೇ ಒಡಂಬಡಿಕೆಯ ಪರಿಶುದ್ಧ ಬರಹಗಳಿಂದ, ಯೇಸು ಕ್ರಿಸ್ತನು ಶ್ರಮೆಪಟ್ಟು, ಸತ್ತವರೊಳಗಿಂದ ಎದ್ದು ಬರುವನೆಂದು ಮುಂತಿಳಿಸಲ್ಪಟ್ಟಿತ್ತೆಂದು ವಾದಿಸುವುದಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 17:3). ಹಳೇ ಒಡಂಬಡಿಕೆಯ ಈ ಯೋಗ್ಯವಾದ ಮತ್ತು ಬಹಳ ಮಹತ್ವದ ಉಪಯೋಗವು ಲೂಕ 24:27ರಲ್ಲಿ ಯೇಸುವಿನಿಂದಲೇ ತೆಗೆದು ಕೊಳ್ಳಲ್ಪಟ್ಟಿದೆ.

## ಸಂಕೇತಗಳನ್ನು ಅರ್ಥ ಮಾಡಿಕೊಳ್ಳುವುದು

ಆತನ ಬಗ್ಗೆ ಪ್ರವಾದನೆಗಳಲ್ಲದೇ, ಯೇಸುವು ಹಳೇ ಒಡಂಬಡಿಕೆಯಲ್ಲಿ ಮಾದರಿಗಳಿಂದ, ಸಂಕೇತಗಳಿಂದ ಇಲ್ಲವೇ ಛಾಯೆಗಳಿಂದ ತೋರಿಸಲ್ಪಟ್ಟಿದ್ದಾನೆ. ಪಾಪಾರೋಪಣೆ ಮಾಡಿ ಕಾಡಿಗೆಬಿಟ್ಟ ಹೋತ, ಪಸ್ಕದ ಕುರಿಮರಿ, ಮಹಾ ಯಾಜಕ, ದೇವಾಲಯದ ತೆರೆ, ಮನ್ನ ಇಲ್ಲವೇ ತಾಮ್ರದ ಸರ್ಪ ಇವುಗಳ ಬಗ್ಗೆ ಕ್ರೈಸ್ತನು ಓದುವಾಗ,

ಕ್ರಿಸ್ತನು ಚಿತ್ರಿಸಲ್ಪಟ್ಟಿದ್ದನ್ನು ನೋಡುತ್ತಾನೆ. ಕ್ರಿಸ್ತನು ಆದಾಮನಲ್ಲಿ, ಮೆಲ್ಕಿಜೆದೇಕನಲ್ಲಿ, ಮೋಶೆಯಲ್ಲಿ, ದಾವೀದನಲ್ಲಿ ಮತ್ತು ಯೋನನಲ್ಲಿ ವರ್ಣಿಸಲ್ಪಟ್ಟದ್ದನ್ನೂ ಅವನು ನೋಡುತ್ತಾನೆ. ನೋಹ ಮತ್ತು ಜಲಪ್ರಳಯದ ಕಥೆಯನ್ನು ಬಾಪ್ತಿಸ್ಮದ ಮಾದಿರಿಯಂತೆ ಗುರುತಿಸುತ್ತಾನೆ (1 ಪೇತ್ರ 3:20, 21). ಹಾಗರ ಮತ್ತು ಸಾರಳ ಕಥೆಯನ್ನು ಅವನು ಓದುವಾಗ, ಹಳೇ ಮತ್ತು ಹೊಸ ಒಡಂಬಡಿಕೆಗಳ ರೂಪಕವನ್ನು ನೋಡುತ್ತಾನೆ (ಗಲಾತ್ಯ 4:21-31).

ಇಬ್ರಿಯರು ಕೆಂಪು ಸಮುದ್ರವನ್ನು ದಾಟಿಹೋಗುವದರಲ್ಲಿ, ಅವನು ಪಾಪಿಯ ಬಾಪ್ತಿಸ್ಮವನ್ನು ನೋಡುತ್ತಾನೆ; ಅರಣ್ಯದಲ್ಲಿ ಅಲೆಯುತ್ತಿರುವದರಲ್ಲಿ, ಅವನು ಸಭೆಯು ಉದಾಹರಿಸಲ್ಪಟ್ಟದ್ದನ್ನು ನೋಡುತ್ತಾನೆ; ಮತ್ತು ವಾಗ್ದತ್ತ ದೇಶದಲ್ಲಿ, ಪರಲೋಕದ ಪೂರ್ವಾನುಭವವನ್ನು ನೋಡುತ್ತಾನೆ. ದೇವ ದರ್ಶನ ಗುಡಾರದಲ್ಲಿ ಹೊಸ ಒಡಂಬಡಿಕೆಯ ಚಿತ್ರವನ್ನು ನೋಡುತ್ತಾನೆ; ಮತ್ತು ಯಾಜಕತ್ವದಲ್ಲಿ ಅವನು ಕ್ರೈಸ್ತತ್ವದ ನೆರಳನ್ನು ನೋಡುತ್ತಾನೆ. ಹಳೇ ಒಡಂಬಡಿಕೆಯ ಸುನ್ನತಿಯಲ್ಲಿ, ಒಬ್ಬನ ಜೀವಿತದಿಂದ ಪಾಪಗಳನ್ನು ಸುವಾರ್ತೆಯು ಕೊಯ್ದು ಹಾಕುವದರ ವಿಧಾನವನ್ನು ನೋಡುತ್ತಾನೆ.

## ಒಡಂಬಡಿಕೆಗಳನ್ನು ಹೋಲಿಸುವುದು

ಒಂದೇ ರೀತಿಯ ತತ್ವಗಳು ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಬೋಧಿಸಲ್ಪಟ್ಟಿವೆ. ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ ಆದರೆ ದೇವರ ವಾಕ್ಯದಿಂದ ಎಂಬ ಸತ್ಯವು ಮೋಶೆಯಿಂದ ಸ್ಪಷ್ಟವಾಗಿ ಬೋಧಿಸಲ್ಪಟ್ಟಂತೆ ಯೇಸುವಿನಿಂದಲೂ ಬೋಧಿಸಲ್ಪಟ್ಟಿದೆ (ಧರ್ಮೋಪದೇಶಕಾಂಡ 8:3; ಮತ್ತಾಯ 4:4). ಮನುಷ್ಯನು ದೇವರನ್ನು ಶೋಧಿಸಬಾರದು (ಮತ್ತಾಯ 4:7) ಎಂಬುದು ಹಳೆಯ ಒಡಂಬಡಿಕೆಯಲ್ಲಿ ಮೊದಲು ಬರೆಯಲ್ಪಟ್ಟದ್ದಕ್ಕಿಂತ ಕಡಿಮೆ ಸತ್ಯವಾದದ್ದಾಗಿರುವದಿಲ್ಲ (ಧರ್ಮೋಪದೇಶ ಕಾಂಡ 6:16). ಮನುಷ್ಯನು ಒಬ್ಬನೇ ನಿಜವಾದ ದೇವರನ್ನು ಆರಾಧಿಸಬೇಕು - ಇದು ಯಾವಾಗಲೂ ಸತ್ಯವಾಗಿತ್ತು ಮತ್ತು ಯಾವಾಗಲೂ ಸತ್ಯವಾಗಿರುವುದು (ಧರ್ಮೋಪದೇಶ ಕಾಂಡ 6:13; ಮತ್ತಾಯ 4:10). ಎರಡೂ ಒಡಂಬಡಿಕೆಗಳ ಆಧೀನತೆಯಲ್ಲಿ ತುಟಿಗಳ ಬಾಹ್ಯ ಸೇವೆಯು ತಪ್ಪಾಗಿರುವುದು (ಯೆಶಾಯ 29:13; ಮಾರ್ಕ 7:6). ಪ್ರತಿಯೊಂದು ಒಡಂಬಡಿಕೆಯ ಅಧೀನತೆಯಲ್ಲಿ ವಿಧೇಯರಾಗಲು ಆಜ್ಞೆಗಳು ಬರೆಯಲ್ಪಟ್ಟವು (ಪ್ರಸಂಗಿ 12:13, 14; ಯೋಹಾನ 15:10). ಪ್ರತಿಯೊಂದರಲ್ಲಿ, ದೇವರ ಸಂದೇಶವು ಬೋಧಿಸಲ್ಪಡುವದರಿಂದ ಕೊಡಲ್ಪಟ್ಟಿದೆ (ಯೆಶಾಯ 54:13; ಯೋಹಾನ 6:45). ಹಳೇ ನಿಯಮದ ಎರಡು ಅತೀ ದೊಡ್ಡ ಆಜ್ಞೆಗಳು (ಧರ್ಮೋಪದೇಶಕಾಂಡ 6:5; ಯಾಜಕ ಕಾಂಡ 19:18) ಕ್ರಿಸ್ತನಲ್ಲಿ ಎರಡು ಅತೀ ದೊಡ್ಡವುಗಳಾಗಿ ಉಳಿಯುತ್ತವೆ (ಮತ್ತಾಯ 22:37-39).

ಹೊಸ ಒಡಂಬಡಿಕೆಯ ನಡತೆಯ ಕೆಲವು ಪ್ರಮುಖ ಬೋಧನೆಗಳನ್ನು ಹಳೇ ಒಡಂಬಡಿಕೆಯ ವಾಕ್ಯಭಾಗಗಳು ಮೇಲೆತ್ತಿ ಹಿಡಿದವು. ಉದಾಹರಣೆಯಾಗಿ ಪೌಲನು ಧರ್ಮೋಪದೇಶಕಾಂಡ 25:4ನ್ನು ಉಲ್ಲೇಖಿಸಿ, ಸುವಾರ್ತಾ ಪ್ರಸಂಗಿಗಳಿಗೆ ಸಹಾಯಾರ್ಥವಾಗಿ ಬೇಡಿಕೆಗಳನ್ನು ಮಾಡಿದನು (1 ಕೊರಿಂಥ 9:9; 1 ತಿಮೊಥೆ 5:18). ನೀತಿಯುಳ್ಳ ಜೀವನದ ಮಹತ್ವವನ್ನ ತೋರಿಸಲು ದಶಾಜ್ಞೆಗಳಿಂದ ಅವನು ಉಲ್ಲೇಖಿಸಿದನು (ರೋಮಾಪುರ 13:8-10). ಪುರುಷರ ನಾಯಕತ್ವಕ್ಕೆ ಮಹಿಳೆಯರ ಅಧೀನತೆಗಾಗಿ ಮನವಿ ಮಾಡಿಕೊಳ್ಳುವಲ್ಲಿ ಅವನು ಹಳೇ ಒಡಂಬಡಿಕೆಯಿಂದ ಉಲ್ಲೇಖಿ

ಸಿದನು (1 ಕೊರಿಂಥ 14:34; ನೋಡಿರಿ ಆದಿಕಾಂಡ 3:16). ಯಾಕೋಬನೂ ಸಹ ಪಕ್ಷಪಾತ ತೋರಿಸುವದಕ್ಕೆ ವಿರುದ್ಧವಾಗಿ ಬೋಧಿಸಲು ದಶಾಜ್ಞೆಗಳ ಮೇಲೆ ಒರಗಿಕೊಂಡನು (ಯಾಕೋಬ 2:8-11).

## ಒಡಂಬಡಿಕೆಗಳ ತಾರತಮ್ಯ ತೋರಿಸುವುದು

ದೇವರು ರಾಜ್ಯದ ತತ್ವಗಳು ರದ್ದುಪಡಿಸಲ್ಪಟ್ಟ ಹಳೇ ಒಡಂಬಡಿಕೆಯ ನಿಯಮಗಳ ವಿರುದ್ಧವಾಗಿ ಹೆಚ್ಚು ಉತ್ತಮವಾಗಿ ಕಾಣುತ್ತವೆ, ಯೇಸುವು ಹಳೇ ಒಡಂಬಡಿಕೆಯಿಂದ ಉಲ್ಲೇಖಿಸಿದನು ಮತ್ತು ತನ್ನ ಅನುಯಾಯಿಗಳಿಗಾಗಿ "ಆದರೆ ನಾನು ಹೇಳುತ್ತೇನೆ" ಎಂಬುದನ್ನು ಕೂಡಿಸಿದನು (ಮತ್ತಾಯ 5:21, 22). ಹಳೇ ಒಡಂಬಡಿಕೆಯ ಸುನ್ನತಿ ಮತ್ತು ಕ್ರಿಸ್ತನಲ್ಲಿಯ ನೂತನ ಜೀವಿಯ ಹೃದಯ-ಸುನ್ನತಿಯ ಮಧ್ಯದಲ್ಲಿ ವಿರೋಧ ವನ್ನು ಪೌಲನು ಒತ್ತಿ ಹೇಳಿದನು (ಯೆಹೋಶುವ 5:2; ಗಲಾತ್ಯ 6:15).

ಹೊಸ ಒಡಂಬಡಿಕೆಯ ಸಜೀವ ಮಾನವ ಯಜ್ಞಗಳಿಗೆ ವಿರುದ್ಧವಾಗಿ ಹಳೇ ಒಡಂಬಡಿಕೆಯ ಸತ್ತ ಪ್ರಾಣಿಗಳ ಯಜ್ಞಗಳನ್ನು ನೋಡುತ್ತೇವೆ (ಯಾಜಕಕಾಂಡ 1:3; ರೋಮಾಪುರ 12:1). ಭೂಲೋಕದ ಯೆರೂಸಲೇಮು ಆತ್ಮಿಕ ಚೀಯೋನಿಗೆ ವಿರುದ್ಧ ವಾಗಿ ಹೇಳಲ್ಪಟ್ಟಿದೆ (1 ಅರಸುಗಳು 9:3; ಗಲಾತ್ಯ 4:26). ಮೊದಲಿನದು ಕಲ್ಲುಗಳ ಮೇಲೆ ಬರೆಯಲ್ಪಟ್ಟಿತು, ಆದರೆ ನಂತರದ್ದು ಹೃದಯಗಳ ಮೇಲೆ ಬರೆಯಲ್ಪಟ್ಟಿತು (2 ಕೊರಿಂಥ 3:3).

## ಉದಾರಹಣೆಗಳಿಂದ ಕಲಿತು ಕೊಳ್ಳುವುದು

ಹಳೇ ಒಡಂಬಡಿಕೆಯ ವ್ಯಕ್ತಿಗಳನ್ನು ದೇವರಿಗೆ ನಂಬಿಗಸ್ತಿಕೆಯ ಪ್ರಚಂಡವಾದ ಉದಾಹರಣೆಗಳನ್ನು ಕೊಡುತ್ತಾರೆ (ಇಬ್ರಿಯ 12:1). ಹಾಗೆಯೇ ಅಪನಂಬಿಗಸ್ತಿಕೆಯ ಪರಿಣಾಮಗಳನ್ನು ಪ್ರದರ್ಶಿಸುತ್ತಾರೆ. ಎಲೀಯನನ್ನು ಮತ್ತು ಒಬ್ಬ ವಿಧವೆಯನ್ನು, ಹಾಗೆಯೇ ಎಲೀಷನನ್ನೂ ಮತ್ತು ನಾಮಾನನನ್ನು ಉಲ್ಲೇಖಿಸಲು ಯೇಸುವು ಕಾರಣಗ ಳನ್ನು ಕಂಡುಕೊಂಡನು (ಲೂಕ 4:25-27). ನೋಹನನ್ನು (ಮತ್ತಾಯ 24:37). ಯೋನನನ್ನು (ಮತ್ತಾಯ 12:41), ಸೊಲೊಮೋನನನ್ನು (ಮತ್ತಾಯ 12:42), ಮತ್ತು ಲೋಟ ಹಾಗೂ ಅವನ ಹೆಂಡತಿಯನ್ನು (ಲೂಕ 17:29, 32) ಸಂಬಂಧಿಸುವದರಿಂದ ತನ್ನ ಪ್ರಸಂಗಗಳಲ್ಲಿ ಉದಾಹರಣೆಯಾಗಿ ಕೊಟ್ಟನು.

ಇಸ್ರಾಯೇಲ್ಯರ ಮಧ್ಯದಲ್ಲಿಯ ಅವಿಧೇಯತೆಯ ಉದಾಹರಣೆಗಳಿಂದ ಕ್ರೈಸ್ತರಿಗೆ ಸಹಾಯವಾಗ ಬಹುದೆಂದು ಪೌಲನು ನಂಬಿದ್ದನು (1 ಕೊರಿಂಥ 10:1-12). ಇಬ್ರಿಯರ ಗ್ರಂಥದ ಲೇಖಕನು ಹಳೇ ಒಡಂಬಡಿಕೆಯ ಮೂಲಗಳನ್ನು ಎಲ್ಲವುಗಳನ್ನೂ ಉಪಯೋ ಗಿಸಲಾರದಷ್ಟು ವಿಪುಲವಾಗಿವೆ ಎಂದು ದೃಷ್ಟಿಸಿದನು: "ಗಿಡಿಯೋನ್, ಬಾರಾಕ್, ಸಂಸೋನ, ಎಫೆಥ, ದಾವೀದ್, ಸಮುವೇಲ್ ಮತ್ತು ಪ್ರವಾದಿಗಳ ವೃತ್ತಾಂತವನ್ನೂ ವಿವರವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು" (ಇಬ್ರಿಯ 11:32).

## ಮುಕ್ತಾಯ

ಹಳೇ ಒಡಂಬಡಿಕೆಯ ತಪ್ಪಾದ ಉಪಯೋಗಗಳಿದ್ದರೂ, ಪ್ರಾಣಗಳ ರಕ್ಷಣೆಗೆ ಲಾಭಕರವಾಗಿಯೂ ಯೋಗ್ಯವಾಗಿಯೂ ಉಪಯೋಗಿಸಲ್ಪಡಬಹುದು. ಅದು ಜಗತ್ತು ಮತ್ತು ಮಾನವ ಕುಲವು ಅಸ್ತಿತ್ವದಲ್ಲಿ ಹೇಗೆ ಬಂದವು ಎಂಬುದನ್ನು ಹೇಳುತ್ತದೆ ಮತ್ತು ನಜರೇತಿನ ಯೇಸುವು ದೇವರ ಕುಮಾರನು ಆಗಿದ್ದಾನೆಂದು ಪ್ರದರ್ಶಿಸುತ್ತದೆ. ಹಳೇ ಒಡಂಬಡಿಕೆಯಲ್ಲಿ ನಾವು ಕ್ರೈಸ್ತತ್ವದ ನೆರಳುಗಳನ್ನು ಕಾಣುತ್ತೇವೆ. ನಾವು ಜೀವಿಸಬೇಕಾದ ಅದೇ ಅನೇಕ ತತ್ವಗಳನ್ನು ಪುನಃ ಹೇಳಿದರೂ ಸ್ವಾತಂತ್ರದ ನಿಯಮದ ಸೌಂದರ್ಯವನ್ನು ಒತ್ತಿ ಹೇಳುವ ವಿರೋದಾಭಾಸಗಳನ್ನು ಸಹ ಅದು ಒಳಗೊಂಡಿರುತ್ತದೆ. ಅಂತಿಮವಾಗಿ, ಇಂದು ದೇವರಿಗೆ ವಿಧೇಯತೆಯಲ್ಲಿ ಜೀವಿಸಲಿಕ್ಕೆ ಜನರನ್ನು ಪ್ರೋತ್ಸಾಹಿಸಲು ಅದು ಸ್ಪಷ್ಟವಾದ ಉದಾಹರಣೆಗಳನ್ನು ಬದಗಿಸುತ್ತದೆ.

Adapted

© 2009 Truth for Today